ಕೇಂದ್ರ ಸರ್ಕಾರಕ್ಕೆ ತೆಗೆದುಕೊಂಡು ಹೋಗುವುದಾಗಿ ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಲಾಗಿದೆ. ಈ ದಿಶೆಯಲ್ಲಿ ಕೇಂದ್ರದ ಜವಳಿ ಖಾತೆ ಮಂತ್ರಿಯವರು ಪತ್ರ ಬರೆದು ಈ ವಿಷಯವನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಹಾಸನದ ಕಿಂಕೋ ಕಾರ್ಖಾನೆ ಕುರಿತು

157 (585): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):–

ಭಾರಿ ಮತ್ತು ಮಾಧ್ಯಮ ಕೈಗಾರಿಕಾ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನದ ಕಿಂಕೋ ಕಾರ್ಖಾನೆಯವರು ಕೆ.ಎಸ್.ಆರ್.ಟಿ.ಸಿ.ಗೆ ವಹಿಸಿಕೊಡಲು ಸರ್ಕಾರ ನಿರ್ಧರಿಸಿದೆಯೇ;

ಆ) ಈ ನಿರ್ಧಾರ ಕಾರ್ಯಗತವಾಗಲು ಇನ್ನೆಷ್ಟು ಕಾಲಾವಕಾಶ ಬೇಕಾಗುವುದು (ವಿವರ ಕೊಡಿ) ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಆ) ಉದ್ಭವಿಸುವುದಿಲ್ಲ.

ಮೈಸೂರು ನಗರದ ನೆಹರು ಲೋಕದ ಬಗ್ಗೆ

361 (1210): ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):–

ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದ ಉದ್ದೇಶಿತ ನೆಹರೂ ಲೋಕಕ್ಕೆ ಸೇರಿದ ಪ್ರದೇಶದ ವಿಸ್ತೀರ್ಣವೆಷ್ಟು;

ಆ) ಈ ನೆಹರೂ ಲೋಕಕ್ಕೆ ಸೇರಿದ್ದ ಪ್ರದೇಶದಲ್ಲಿ ಭೂ ಬದಲಾವಣೆ ನೀಡಲಾಗಿರುವ ಜಮೀನು ವಿಸ್ತೀರ್ಣವೆಷ್ಟು;

ಇ) ನೆಹರೂ ಲೋಕದ ಪ್ರದೇಶದಿಂದ ಭೂ ಬದಲಾವಣೆ ಪಡೆದವವುಗಳ ಹೆಸರುಗಳೇನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) 4038 ಎಕರೆಗಳು.

ಆ) ಇದುವರೆವಿಗೂ ಯಾವುದೇ ಜಮೀನಿನ ಭೂ ಉಪಯೋಗ ಬದಲಾವಣೆ ಆಗಿರುವುದಿಲ್ಲ.

ಇ) ಯಾರೂ ಇಲ್ಲ.

ಮೈಸೂರು ರೇಷ್ಮೆ ಬಿತ್ತನೆ ವಲಯದ ಅಭಿವೃದ್ಧಿಯ ಬಗ್ಗೆ

363 (668): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1992–93ನೇ ವರ್ಷದಲ್ಲಿ ಮೈಸೂರು ಬಿತ್ತನೆ ವಲಯದಲ್ಲಿ ವಿವಿಧ ಯೋಜನೆಗಳಲ್ಲಿ ರೇಷ್ಮೆ ಇಲಾಖೆಗೆ ಖರ್ಚು ಮಾಡಿದ ಹಣ ಎಷ್ಟು;

ಆ) ಯೋಜನೆಗಳ ಅನುಷ್ಠಾನ ಯಾವ ಹಂತದಲ್ಲಿ ಇದೆ ಮತ್ತು ಯಾವಾಗ ಪೂರ್ಣಗೊಳ್ಳುವುದು ?

ಡಾ।। ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಅ) 441.58 ಲಕ್ಷ ರೂಪಾಯಿಗಳು.

ಆ) 1. ಬಿತ್ತನೆ ವಲಯದ ರೈತರಿಗೆ ಹುಳು ಸಾಕುವ, ಮನೆ ಕಟ್ಟಲು, ಉಪಕರಣಗಳನ್ನು ಕೊಳ್ಳಲು ಮತ್ತು ಕೊಳವೆ ಬಾವಿ ತೋಡಲು ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರ ಬ್ಯಾಂಕುಗಳ ಮುಖಾಂತರ ಸಾಲ ಕೊಡುವ ಯೋಜನೆ ಮೂರು ವರ್ಷಗಳದ್ದಾಗಿದ್ದು, ಇದನ್ನು 1991-92ರ ಕೊನೆಯಲ್ಲಿ ಕಾರ್ಯರೂಪಕ್ಕೆ ತಂದಿದ್ದು 1993-94ರ ಅಂತ್ಯದಲ್ಲಿ ಪೂರ್ಣಗೊಳ್ಳುತ್ತದೆ.

2. ಕರ್ನಾಟಕ ರೇಷ್ಮೆ ಕೃಷಿ ಯೋಜನೆ 2ನೇ ಹಂತದಲ್ಲಿ ಪಿ4 ಮತ್ತು ಪಿ3 ರೇಷ್ಮೆ ಕೃಷಿ ತೋಟಗಳ ಅಭಿವೃದ್ಧಿ ರೈನೇಜುಗಳ ಅಭಿವೃದ್ಧಿ ಹಾಗೂ ಮಾದರಿ ಚಾಕಿ ಸಾಕಣೆ ಕೇಂದ್ರಗಳ ಸ್ಥಾಪನೆಯಡಿಯಲ್ಲಿ ಈಗಾಗಲೇ 35 ಕಾಮಗಾರಿಗಳು ಪೂರ್ತಿಯಾಗಿದ್ದು ಉಳಿದವುಗಳು ಮಾರ್ಚ್ 94ರ ಒಳಗೆ ಪೂರ್ತಿಗೊಳ್ಳುವವು.

ಗೌರವಧನ ಹೆಚ್ಚಿಸುವ ಬಗ್ಗೆ

366 (409): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಒಟ್ಟು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಖ್ಯೆ ಎಷ್ಟು;

ಆ) ಐಸಿಡಿಎಸ್ ಯೋಜನೆಗೆ ಕೇಂದ್ರ ಸರ್ಕಾರದ ಸಹಾಯ ಧನವೆಷ್ಟು;

ಇ) ಮಹಾರಾಷ್ಟ್ರ ಹಾಗೂ ಗೋವಾದಲ್ಲಿರುವಂತೆ ರಾಜ್ಯದಲ್ಲಿರುವ ಅಂಗನವಾಡಿ ಉದ್ಯೋಗಿಗಳಿಗೆ ಗೌರವ ಧನ ಕೊಡದಿರಲು ಕಾರಣವೇನು;

ಈ) ಇತ್ತೀಚೆಗೆ ಕೇಂದ್ರ ಸರ್ಕಾರ ಹೆಚ್ಚಿಸಿರುವ ಗೌರವಧನವನ್ನು ಕೊಡಲಾಗಿದೆಯೇ;

ಉ) ರಾಜ್ಯ ಸರ್ಕಾರವೂ ಸಹ ಇವರ ಗೌರವಧನವನ್ನು ಏಕೆ ಹೆಚ್ಚಿಸಬಾರದು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ) 24397 ಅಂಗನವಾಡಿ ಕಾರ್ಯಕರ್ತೆಯರು
24397 ಅಂಗನವಾಡಿ ಸಹಾಯಕಿಯರು

ಆ) ಕೇಂದ್ರ 118 ಐಸಿಡಿಎಸ್ ಯೋಜನೆಗಳ ಆಡಳಿತಾತ್ಮಕ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುತ್ತಿದೆ. ಮತ್ತು 30 ರಾಜ್ಯ ವಲಯದ ಯೋಜನೆಗಳ ಆಡಳಿತಾತ್ಮಕ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸುತ್ತಿದೆ. ಕೇಂದ್ರ ಹಾಗೂ ರಾಜ್ಯ ವಲಯದ ಯೋಜನೆಗಳ ಪೌಷ್ಟಿಕ ಆಹಾರದ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸುತ್ತಿದೆ. 1992-93ನೇ ಸಾಲಿನಲ್ಲಿ ಇದಕ್ಕೆ ಒದಗಿಸಲಾಗಿರುವ ಆಯವ್ಯಯವು ಈ ಕೆಳಗಿನಂತಿದೆ.